# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




G-20 ಶೃಂಗಸಭೆಯ ನಿಮಿತ್ತ ಭಾರತಕ್ಕೆ ಆಗಮಿಸಿದ್ದ ಬ್ರಿಟನ್ ಪ್ರಧಾನಿ ರಿಶಿ ಸುನಾಕ್ ಅವರು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿರುವ ಅಕ್ಷರಧಾಮ ದೇವಾಲಯಕ್ಕೆ ಭೇಟಿ ನೀಡಿದರು.


ಸಂಪುಟ : 45 | ಸಂಚಿಕೆ : 12 | ಭಾದ್ರಪದ–ಆಶ್ವಯುಜ | ಕಲಿಯುಗಾಬ್ದ 5125 | 01–10–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಸನಾತನ ಸಂಸ್ಕೃತಿಯ ಆಶಯಗಳನ್ನು ಜಗತ್ತಿಗೆ ಪರಿಚಯಿಸಿದ ಜಿ–20 ಶೃಂಗಸಭೆ

ಪ್ರಸ್ತುತ ರಾಷ್ಟ್ರವ್ಯಾಪಿ ಸನಾತನ ಧರ್ಮದ ಕುರಿತ ಚರ್ಚೆ ಚಾಲ್ತಿಯಲ್ಲಿದೆ. ಇಂತಹ ಚರ್ಚೆ ಹೊಸತೇನಲ್ಲ. ಭಾರತ ತನ್ನತನವನ್ನು ಸಮರ್ಥವಾಗಿ ವಿಶ್ವದೆದುರು ಪ್ರತಿಷ್ಠಾಪಿಸಿದ ಸಂದರ್ಭಗಳಲ್ಲೆಲ್ಲಾ ಇಂತಹ ಚರ್ಚೆಗಳು ರಕ್ತಬೀಜಾಸುರನಂತೆ ಅವತಾರವೆತ್ತಿವೆ. ಹಾಗೆಯೇ ಆಯಾಕಾಲಘಟ್ಟದಲ್ಲಿ ಸತ್ಯವೇ ದುರ್ಗೆಯಂತೆ ಅವತರಿಸಿ ಇಂತಹ ರಕ್ತಾಬೀಜಾಸುರರನ್ನು ಸಂಹಾರಗೊಳಿಸಿದ್ದೂ ಇದೆ. ಇದಕ್ಕೊಂದು ನಿದರ್ಶನವನ್ನು ನೀಡುವುದಾದರೆ ಸೆಪ್ಟೆಂಬರ್ 11, 1893ರಂದು ಅಮೆರಿಕಾ ತನ್ನ ಅಸ್ತಿತ್ವದ 400ನೇ ವರ್ಷಾಚರಣೆಯ ಪ್ರಯುಕ್ತ, ತನ್ನ ಮತವೇ ಶ್ರೇಷ್ಠವೆನ್ನುವುದನ್ನು ಜಗಜ್ಜಾಹೀರುಗೊಳಿಸುವುದಕ್ಕೆ ಆಯೋಜಿಸಿದ್ದ ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾರತದ ಹಿಂದೂ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಿದ ಸ್ವಾಮಿ ವಿವೇಕಾನಂದರು ನಿಜವಾದ ವಿಶ್ವಧರ್ಮ ಯಾವುದು ಎನ್ನುವುದನ್ನು ತಿಳಿಸಿದರು. ಅಂದಿನ ಕೆಲವು ಪ್ರಾಜ್ಞರ ಪ್ರಕಾರ ಸ್ವಾಮಿ ವಿವೇಕಾನಂದರು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದರಿಂದ ಅದು ವಿಶ್ವ ಧರ್ಮ ಸಮ್ಮೇಳನ ಎನಿಸಿತು. ಇಲ್ಲದಿದ್ದರೆ, ಅದು ಕೇವಲ ಸ್ವ ಮತ ಪ್ರತಿಪಾದಕ ಸಭೆಯಾಗಿರುತ್ತಿತ್ತು ಎನ್ನುವುದನ್ನು ತಿಳಿಸಿದ್ದಾರೆ. ಅಂದು ಭಾರತ ತನ್ನ ನೆಲದ ಅಸ್ಮತೆಯ ಆಧಾರದಲ್ಲಿ ದಿಗ್ವಿಜಯವನ್ನು ಸಾಧಿಸಿದ ಸಂಕೇತವಾಗಿ ಇಂದಿಗೂ ಆಚರಿಸಲಾಗುತ್ತದೆ.

ಸ್ವಾಮಿ ವಿವೇಕಾನಂದರ ಅಂದಿನ ಪ್ರತಿನಿಧಿತ್ವಕ್ಕೂ ಮುನ್ನವೂ ಭಾರತದ ಕುರಿತು ಹಳಿಯುವ ಪಾಶ್ಚಾತ್ಯರ ಚಾಳಿ ಇದ್ದೇ ಇತ್ತು. ಆದರೆ ಅವರ ಭಾಷಣದ ನಂತರ ಬಹುದೊಡ್ಡ ಮಟ್ಟದಲ್ಲಿ ಅಂತಹ ಪ್ರಶ್ನೆಗಳ ಪ್ರವಾಹವನ್ನು ವಿವೇಕಾನಂದರ ಎದುರಿಸಬೇಕಾಯಿತು! ಅವೆಲ್ಲಕ್ಕೂ ಅಂದು ವಿವೇಕಾನಂದರು ಸಮರ್ಥವಾಗಿ ಉತ್ತರಿಸಿದ್ದಲ್ಲದೇ, ಭಾರತಕ್ಕೆ ಮರಳಿದ ನಂತರ ಭಾರತದಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುವ ಮೂಲಕ ಭಾರತ ಟೀಕೆಗೆ ಒಳಗಾಗುತ್ತಿದ್ದ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡಿದರು. ಇಂದಿಗೂ ಭಾರತದ ಆತ್ಮವೇ ಆದ ಸನಾತನ ಧರ್ಮದ ಕುರಿತು ಹಲವು ಟೀಕಾಪ್ರಹಾರಗಳು ಇರುವುದು ಸಹಜ. ಆದರೆ ಭಾರತ ಉತ್ತರಿಸುವ ಶೈಲಿ ಬದಲಾಗಿದೆ ಎನ್ನುವುದಕ್ಕೆ ಸೆಪ್ಟೆಂಬರ್ 9 ಮತ್ತು 10, 2023ರಂದು ನಡೆದ ಜಿ–20 ಶೃಂಗಸಭೆಯ 'ದೆಹಲಿ ಡಿಕ್ಲರೇಶನ್' ಉತ್ತಮ ಉದಾಹರಣೆ.

**ವಸುಧೈವ ಕುಟುಂಬಕಮ್:** ವಿಶ್ವವೇ ಒಂದು ಕುಟುಂಬ ಎಂಬ ನಮ್ಮ ಸಂಸ್ಕೃತಿಯ ನಂಬಿಕೆಯೇ ಈ ಬಾರಿಯ ಜಿ–20 ಧ್ಯೇಯವಾಗಿತ್ತು. ಕೇವಲ ಧ್ಯೇಯವಾಗಿ ಉಳಿಯದೆ ವಿಶ್ವವೇ ಒಂದು ಕುಟುಂಬ ಎನ್ನುವುದನ್ನು ಭಾರತದ ನಾಯಕತ್ವ ಸಾಕಾರಗೊಳಿಸಿದೆ. ಯಾವ ಆಫ್ರಿಕನ್ ದೇಶಗಳನ್ನು ಯುರೋಪ್ ಮತ್ತು ಅಮೇರಿಕಾ ಕೇವಲ ಸೇವಕರಂತೆ ಕಂಡು ತಿರಸ್ಕರಿಸಿತ್ತೋ, ಅಂತಹ ಆಫ್ರಿಕನ್ ಒಕ್ಕೂಟವನ್ನು ಜಿ–20 ಸದಸ್ಯ ರಾಷ್ಟ್ರವಾಗಿ ಸೇರಿಸಿಕೊಂಡು ಜಿ–20, ಇನ್ನು ಮುಂದೆ ಜಿ–21 ಆಗಿ ಮರುಸ್ವರೂಪ ಪಡೆಯುವಲ್ಲಿ ಭಾರತದ ಭ್ರಾತೃತ್ವ ಭಾವ ಪ್ರಮುಖ ಕಾರಣ. ಸನಾತನ ಎನ್ನುವ ಶಬ್ದಕ್ಕೆ 'ನಿತ್ಯ' ಅಂದರೆ ಯಾವುದು ಹಿಂದೆಯೂ ಇತ್ತು, ಇಂದೂ ಇದೆ, ಮುಂದೆಯೂ ಇರುತ್ತದೆ ಎಂಬ ಅರ್ಥವಿದೆಯೋ ಅದರ ಪ್ರತೀಕವಾಗಿಯೇ ಭಾರತ ಕಾರ್ಯನಿರ್ವಹಿಸುತ್ತಿದೆ. ಭ್ರಾತೃತ್ವ ಎನ್ನುವುದು ಜಗತ್ತಿನ ಸಾರ್ವಕಾಲಿಕ ಅಗತ್ಯವಾಗಿದೆ ಹಾಗೂ ಸನಾತನ ಸಂಸ್ಕೃತಿಯ ಭಾಗವೇ ಆಗಿದೆ.

G20

भारत 2023 INDIA

वसुधैव कुटुम्बकम्

ONE EARTH • ONE FAMILY • ONE FUTURE



*ಭಾರತ ಮಂಟಪಂ ಎದುರಿನ ನಟರಾಜ ಪ್ರತಿಮೆ ಜಿ–20 ಶೃಂಗಸಭೆಗೆ ಸಾಂಸ್ಕೃತಿಕ ಮೆರಗು ನೀಡಿತು.*

**ಜಿ–20 ನಾಯಕತ್ವ ಮತ್ತು ಭಾರತ:** ನಾಯಕನಾದವನು ಪ್ರತಿ ವ್ಯಕ್ತಿಯ ಅಭಿಪ್ರಾಯಗಳನ್ನು, ಆಶಯಗಳನ್ನು ಗೌರವಿಸಬೇಕು. ಭಾರತವೂ ತನ್ನ ನಾಯಕತ್ವವನ್ನು ನಿಭಾಯಿಸಿದ ರೀತಿ ನಿಜಕ್ಕೂ ಹೆಮ್ಮೆಯ ಸಂಗತಿ. ಇಲ್ಲಿ ಭಾರತಕ್ಕಿದ್ದ ಸವಾಲು ಅಮೇರಿಕಾ, ಚೀನಾ, ಯುರೋಪಿಯನ್ ಯೂನಿಯನ್‌ನಂತಹ ಅಭಿವೃದ್ಧಿ ಹೊಂದಿನ ರಾಷ್ಟ್ರಗಳ ಆಶಯಗಳ ಜೊತೆಗೆ ದಕ್ಷಿಣ ಆಫ್ರಿಕಾ, ಇಂಡೋನೇಷಿಯಾ ಮೊದಲಾದ ಸಣ್ಣ ರಾಷ್ಟ್ರಗಳ ಆಶಯವನ್ನೂ ಗಮನದಲ್ಲಿಟ್ಟುಕೊಂಡು ನಿರ್ಣಯಗಳನ್ನು ರಚಿಸಬೇಕಿತ್ತು. ಜಿ–20 ಸಭೆಯಲ್ಲಿ ಕೊನೆಗೆ ಪ್ರಸ್ತಾಪಿಸುವ ನಿರ್ಣಯವನ್ನು ಎಲ್ಲರೂ ಒಪ್ಪುವಂತೆ ಮಾಡುವುದು ಸವಾಲಿನ ಸಂಗತಿಯೇ ಆಗಿತ್ತು. ಜಿ–20 ಸದಸ್ಯ ರಾಷ್ಟ್ರಗಳಲ್ಲಿ ಸದಾ ಭಾರತದೊಂದಿಗೆ ಒಂದಿಲ್ಲೊಂದು ಕಾರಣಕ್ಕಾಗಿ ಕಾಲ್ಕೆರೆದು ಜಗಳಕ್ಕೆ ಬರುವ, ಸದ್ಯಕ್ಕಂತೂ ಭಾರತದ ಏಳಿಗೆಯನ್ನು ಬಯಸದ ಚೀನಾವೂ ಇದೆ. ಹೀಗಿರುವಾಗ ಭಾರತದ ನಾಯಕತ್ವದಲ್ಲಿ ನಡೆದ ಈ ಜಿ–20ಯ ನಿರ್ಣಯಗಳನ್ನು ಚೀನಾವೂ ಸೇರಿದಂತೆ ಎಲ್ಲಾ ಸದಸ್ಯ ರಾಷ್ಟ್ರಗಳು ಸರ್ವಾನುಮತದಿಂದ ಬೆಂಬಲಿಸಿದೆ ಎನ್ನುವುದು ಅಚ್ಚರಿಯೇ ಸರಿ. ಅತ್ಯಂತ ಸಂಕೀರ್ಣ ಸಮಸ್ಯೆಗಳಾದ ರಷ್ಯಾ–ಉಕ್ರೇನ್ ಯುದ್ಧದ ಸಂಗತಿ ಸೇರಿದಂತೆ ಭಾರತ ಜಗತ್ತಿನ ಕಲ್ಯಾಣದ ದೃಷ್ಟಿಯಿಂದ ತೆಗೆದುಕೊಂಡ 83 ಪ್ಯಾರಾಗಳ ನಿರ್ಣಯಗಳನ್ನು ಚಕಾರವೆತ್ತದೆ ಒಪ್ಪಿಕೊಂಡಿತು. ಇದರ ಹಿಂದೆ ರಾಜತಾಂತ್ರಿಕ ಅಧಿಕಾರಿಗಳ ಶ್ರಮವೂ ಹಾಗೆಯೇ ಇದೆ. ಒಟ್ಟು 200 ಗಂಟೆಗಳ ಸಭೆ, 300ಕ್ಕೂ ಹೆಚ್ಚು ದ್ವಿಪಕ್ಷೀಯ ಮಾತುಕತೆ ಮತ್ತು 15 ಕರಡು ಪ್ರಸ್ತಾಪಗಳ ತರುವಾಯ ವಿಶ್ವಕ್ಕೆ ನಮ್ಮ ನಿರ್ಣಯಗಳ ಅನಿವಾರ್ಯತೆಗಳನ್ನು ತಿಳಿಸಿ ಮನವೊಲಿಸುವಲ್ಲಿ ಭಾರತ ಗೆದ್ದಿದೆ. ಇದೂ ಕೂಡ ಭಾರತ ಜಗತ್ತಿಗೆ ಇದುವರೆಗೂ ನೀಡಿದ್ದೆಲ್ಲಾ ಒಳ್ಳೆಯ ಸಂಗತಿಯೇ ಮತ್ತು ಸನಾತನ ಧರ್ಮದ ಮೂಲ ಆಶಯವೂ ಕೇವಲ ಒಳ್ಳೆಯದನ್ನು ಸಾರುವುದೇ ಆಗಿದೆ ಎನ್ನುವುದನ್ನೇ ಪ್ರತಿಪಾದಿಸಿದೆ.


**ಸನಾತನ ಸಂಸ್ಕೃತಿಯ ಶ್ರೇಷ್ಠತೆಯನ್ನು ಜಗತ್ತಿನ ಎದುರಿಗಿಟ್ಟ ಜಿ–20:** ಈ ಹಿಂದೆ ಭಾರತದಲ್ಲಿ ನಡೆದ ಅಂತರಾಷ್ಟ್ರೀಯ ಸಭೆಗಳೆಲ್ಲವೂ ಪ್ರಮುಖ ನಗರಗಳಲ್ಲಿ ನಡೆಯುತ್ತಿತ್ತು. ಆದರೆ ಜಿ–20ಯಂತಹ ಜಗತ್ತಿನ ಪ್ರಮುಖ ರಾಷ್ಟ್ರಗಳ ಸಭೆ ಸಂಪೂರ್ಣ ಭಾರತವನ್ನು ಪ್ರತಿನಿಧಿಸುವ ನಿಟ್ಟಿನಲ್ಲಿ ನಾನಾ ಭಾಗಗಳಲ್ಲಿ ಜರುಗಿದವು. ಭಾರತದ 60 ನಗರಗಳಲ್ಲಿ ನಡೆದ ಇನ್ನೂರಕ್ಕೂ ಹೆಚ್ಚು ಸಭೆಗಳು ಭಾರತದ ಸಾಂಸ್ಕೃತಿಕ ವೈಭವದ ಅನಾವರಣಕ್ಕೆ ಕಾರಣವಾಗಿವೆ. ಜಿ–20ಯ ಕಾರಣಕ್ಕಾಗಿ ಭಾರತಕ್ಕೆ ಬಂದ ಜಗತ್ತಿನ ಪ್ರಮುಖ ರಾಷ್ಟ್ರಗಳ ಪ್ರತಿನಿಧಿಗಳು ಭಾರತದ ವೈವಿಧ್ಯತೆಯನ್ನು ಸಂಭ್ರಮಿಸುವ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಇಲ್ಲಿನ ಕಲೆ, ಶಿಲ್ಪಕಲೆ, ದೇವಾಲಯಗಳನ್ನು ಕಂಡು ಬೆರಗಾಗಿದ್ದಾರೆ. ಈ ಎಲ್ಲಾ ಅವಕಾಶಗಳು ಭಾರತ ಎಂದರೇನು? ಎನ್ನುವುದನ್ನು ವಿಶ್ವಕ್ಕೆ ಪರಿಚಯಿಸುವಲ್ಲಿ ಸಫಲವಾಗಿದೆ. ಪ್ರಥಮ ಬಾರಿಗೆ ವಿಶ್ವದೆದುರು ಭಾರತ ತನ್ನ ನಿಜನಾಮವಾದ 'ಭಾರತ'ದಲ್ಲೇ ಗುರುತಿಸಿಕೊಂಡಿದೆ. ಇದೂ ಕೂಡ ಭಾರತದ ಸಾಂಸ್ಕೃತಿಕ ಪುನರುತ್ಥಾನದ ಸಂಕೇತವಾಗಿ ಕಾಣಿಸುತ್ತದೆ.

**ಭಾರತದ ಜಿ–20 ನಿರ್ಣಯ, ಸನಾತನದ ಆಶಯ:** ಈ ಬಾರಿಯ ಜಿ–20 ನಿರ್ಣಯ ಸಂಪೂರ್ಣವಾಗಿ ಭಾರತೀಯ ಸಂಸ್ಕೃತಿಯ ಮೂಲ ಆಶಯವನ್ನೇ ಪ್ರತಿಪಾದಿಸಿದೆ. ಉದಾಹರಣೆಗೆ ಆರ್ಥಿಕ ಒಕ್ಕೂಟವಾದ ಜಿ–20ಯಲ್ಲಿ ಯುದ್ಧದ ಕುರಿತಾದ ಚರ್ಚೆ ಬೇಡ ಎಂದಿದ್ದ ಬ್ರೆಜಿಲ್ ಅಧ್ಯಕ್ಷ ಲೂಲ ಡ ಸಿಲ್ವಾ ಅವರಿಗೆ ರಷ್ಯಾ–ಯುಕ್ರೇನ್ ಯುದ್ಧದ ಕುರಿತಾದ ಜಿ–20 ಒಕ್ಕೂಟದ ನಿಲುವಿನ ಮಹತ್ವವನ್ನು ತಿಳಿಸಿ ಶಾಂತಿ ಕಾಪಾಡಬೇಕೆಂಬ ನಿರ್ಣಯ ಕೈಗೊಂಡಿದ್ದು ಭಾರತದ ಮೂಲ ಆಶಯವೇ ಆಗಿದೆ. ಭಾರತದ ಪ್ರಾಚೀನ ಆರ್ಥಿಕ ವ್ಯವಸ್ಥೆ ಸದಾ ಪ್ರಕೃತಿಗೆ ಪೂರಕವಾಗಿತ್ತು. ಆದರೆ ಕೈಗಾರಿಕಾ ಕ್ರಾಂತಿಯ ನಂತರ ಬದಲಾಗಿದ್ದು ಎಲ್ಲರಿಗೂ ತಿಳಿದೇ ಇದೆ. ಈಗ ಪುನಃ ಭಾರತ ತನ್ನ ನಾಯಕತ್ವದ ಅಡಿಯಲ್ಲಿ ನ್ಯಾಯಯುತ ಜಗತ್ತು ಮತ್ತು ಸುಸ್ಥಿರ ಗ್ರಹ ನಿರ್ಮಾಣದ ಸಂಕಲ್ಪಕ್ಕೆ ಜಗತ್ತನ್ನು ಸಜ್ಜುಗೊಳಿಸುತ್ತಿದೆ. ಹಸಿವು ಮತ್ತು ಬಡತನದ ವಿರುದ್ಧ ಧ್ವನಿಯೆತ್ತಿದೆ. ಸುಲಲಿತ ವ್ಯಾಪಾರದ ಮೂಲಕ ಸ್ನೇಹ–ಸಂಬಂಧವನ್ನು ವೃದ್ಧಿಸಲು ಸಹಕಾರಿಯಾಗುವ ಭಾರತ–ಯೂರೋಪ್ ಕಾರಿಡಾರ್ ಕೂಡ ನಿರ್ಮಾಣವಾಗಲಿದೆ. ಇದೆಲ್ಲವೂ ಭಾರತದ ಸಂಸ್ಕೃತಿಯ ಮೂಲ ಆಶಯವೇ ಆಗಿದೆ. ಜಗತ್ತಿನ ಸ್ವಾಸ್ತ್ಯದ ವಿಷಯದಲ್ಲಿ ರಾಜಕೀಯ ಒಳಗೊಳ್ಳದ, ಸುಸ್ಥಿರ ಅಭಿವೃದ್ಧಿಯ ಪರವಿರುವ ಹಾಗೂ ಎಲ್ಲರ ಆಶಯಗಳನ್ನೂ ಒಳಗೊಂಡ ಭಾರತದ ಈ ನಿರ್ಣಯಗಳನ್ನು ಫ್ರಾನ್ಸ್, ಅಮೇರಿಕಾ, ಬ್ರಿಟನ್, ಬ್ರೆಜಿಲ್ ನಂತಹ ಬಲಾಢ್ಯ ರಾಷ್ಟ್ರಗಳು ಮೆಚ್ಚುಗೆ ವ್ಯಕ್ತ ಪಡಿಸಿದೆ.




ಒಟ್ಟಿನಲ್ಲಿ ಯಾವ ನೆಲದ ಧರ್ಮ, 'ಕರ್ತವ್ಯ', 'ಒಳ್ಳೆಯ ತನ' ಎನ್ನುವುದಕ್ಕೆ ಸಂವಾದಿಯಾಗಿ ಆಚರಣೆಯಲ್ಲಿತ್ತೋ, ಈ ನೆಲದ ಗುಣ ಧರ್ಮವನ್ನು ಸರ್ವೋಚ್ಚ ನ್ಯಾಯಾಲಯ 'The Way of Life' ಎಂದು ಸಂಬೋಧಿಸಿತ್ತೋ ಅದೇ ಧರ್ಮ ಮತ್ತೊಮ್ಮೆ ಕೇವಲ ವಿತಂಡವಾದಗಳಿಗೆ ಉತ್ತರಿಸಲು ಬಳಕೆಯಾಗದೆ ಮತ್ತೊಮ್ಮೆ ನಮ್ಮ ಜೀವನಪದ್ಧತಿಯಾಗುವತ್ತ ದಾಪುಗಾಲನ್ನಿರಿಸಿದೆ. ಈ ಸಂದರ್ಭದಲ್ಲಿ ಬೌದ್ಧಿಕ ದಾಸ್ಯಕ್ಕೆ ಒಳಗಾಗದೆ ನಮ್ಮ ರಾಷ್ಟ್ರದ ಧರ್ಮ ಏನು ಎಂಬ ಸ್ಪಷ್ಟತೆಯನ್ನು ನಾವು ಅರಿತುಕೊಂಡಾಗ ದ್ವಂದ್ವದ ನಿಲುವಾಗಲಿ, ಅಭಿಪ್ರಾಯಗಳಾಗಲಿ ನಮ್ಮಲ್ಲಿ ಮೂಡುವುದಿಲ್ಲ. ಯಾವ ಸರ್ವ ಸಮಾನತೆ ಮತ್ತು ಸರ್ವಮಾನ್ಯತೆಯನ್ನು ಸನಾತನ ಧರ್ಮ ಪ್ರತಿಪಾದಿಸಿತ್ತೋ, ಯಾವ ಸುಜ್ಞಾನವನ್ನು ಭಾರತ (ಭಾರತೀಯರ ಮೂಲಕ) ಜಗತ್ತಿಗೆ ಪಸರಿಸಿತ್ತೋ, ಅದನ್ನು ಮರಳಿ ತನ್ನ ನಿಜನಾಮದಲ್ಲೇ (ಭಾರತದ ಪ್ರಧಾನ ಮಂತ್ರಿಯ ಎದುರುಗಡೆ ನಮ್ಮ ರಾಷ್ಟ್ರದ ಹೆಸರು ಭಾರತ ಎಂದೇ ಇತ್ತು) ವಿಶ್ವವೆಂಬ ಕುಟುಂಬವನ್ನು ಮುನ್ನಡೆಸಿದ ಅನುಭವ ಪ್ರತಿ 'ಭಾರತೀಯ'ನಿಗೆ ಇಂದು ಆಗುತ್ತಿದೆ.

## ಸಂಸ್ಮರಣೆ ಡಾ. ಶಿವರಾಮ ಕಾರಂತ (10 ಅಕ್ಟೋಬರ್ 1902 – 9 ಡಿಸೆಂಬರ್ 1997)



"ಶಿವರಾಮ ಕಾರಂತರನ್ನು ನಿಮಗೆ ಪರಿಚಯ ಮಾಡಿಕೊಡುವುದು ಒಂದೇ, ನೇಸರನನ್ನು ಸೊಡರಿನಿಂದ ತೋರಿಸುವುದು ಒಂದೇ" ಎಂದವರು ನವ್ಯ ಕಾಲದ ಮಹತ್ವದ ಕವಿ ಗೋಪಾಲಕೃಷ್ಣ ಅಡಿಗರು. ಶಿವರಾಮ ಕಾರಂತರು ಒಂದಿಡೀ ತಲೆಮಾರನ್ನು ಇಡಿಯಾಗಿ ಆವರಿಸಿಕೊಂಡ ಮಹಾ ವಿಸ್ಮಯ.

**ನಡೆದಾಡುವ ವಿಶ್ವಕೋಶ ಕಾರಂತರ ಕಿರು ಪರಿಚಯ:** ಶಿವರಾಮ ಕಾರಂತರು ಜನಿಸಿದ್ದು ಅಕ್ಟೋಬರ್ 10, 1902ರಲ್ಲಿ. ಉಡುಪಿಯ ಸಾಲಿಗ್ರಾಮ ಅವರ ಜನ್ಮಸ್ಥಳ. ಕೂಡು ಕುಟುಂಬದಲ್ಲಿ ಜನಿಸಿದ ಕಾರಂತರು ಹುಟ್ಟೂರಿನಲ್ಲಿಯೇ ತಮ್ಮ ಶಿಕ್ಷಣವನ್ನು ಮುಗಿಸಿದರು. ಕವಿಯಾಗಿ, ಕಾದಂಬರಿಕಾರರಾಗಿ ಮತ್ತು ನಾಟಕಕಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆಂದೇ ತಮ್ಮನ್ನು ಅರ್ಪಿಸಿಕೊಂಡರು. ಕಾರಂತರು ಬರಹಗಾರರಾಗಿ ಅಷ್ಟೇ ಅಲ್ಲದೆ ಅಪ್ಪಟ ಪರಿಸರ ಪ್ರೇಮಿಯಾಗಿ ಹೊಸ ಪ್ರಯೋಗಗಳಿಗೆ ನಾಂದಿ ಹಾಡಿದವರು. ಯಕ್ಷಗಾನ, ನಾಟಕ, ಬಯಲಾಟ ಕಲೆಗಳಲ್ಲೂ ಕಾರಂತರು ಪರಿಣಿತಿಯನ್ನು ಹೊಂದಿದ್ದರು. ಅಷ್ಟೇ ಅಲ್ಲ ದೇಶದ ಸ್ವಾತಂತ್ರ್ಯ ಹೋರಾಟದಲ್ಲೂ ಕಾರಂತರು ಮುಂಚೂಣಿಯಲ್ಲಿದ್ದು ಸ್ವಾತಂತ್ರ್ಯದ ಕಿಡಿಯನ್ನು ದೇಶ ಬಾಂಧವರಲ್ಲಿ ಹೊತ್ತಿಸಿದ್ದರು.

**ಶಿವರಾಮ ಕಾರಂತರ ಮಹತ್ವದ ಕೃತಿಗಳು:** ಢಮ್ ಢಮ್ ಎಂದು ದುಡಿಯನ್ನು ಬಾರಿಸುತ್ತಲೇ ನೆಲಕ್ಕೊರಗಿ ಕಣ್ಣು ಮುಚ್ಚುವ ಚೋಮನ ಪಾತ್ರವನ್ನು (ಚೋಮನ ದುಡಿ ಕೃತಿ) ಕನ್ನಡ ಸಾಹಿತ್ಯ ಲೋಕದ ಯಾವ ಓದುಗರೂ ಮರೆಯುವುದಿಲ್ಲ. ಇನ್ನು ಬೆಟ್ಟದ ಜೀವ ಕೃತಿ ಉಂಟು ಮಾಡಿದ ಪುಳಕ ಎಂಥವರನ್ನೂ ಹಿಡಿದು ಕೂರಿಸಿಬಿಡುತ್ತದೆ. ಮೂಕಜ್ಜಿಯ ಕನಸುಗಳು ಕೃತಿಯಲ್ಲಿನ ಮುಗ್ಧ ಹುಡುಗ ಸುಬ್ರಾಯ ಮತ್ತು ಮೂಕಜ್ಜಿಯ ಪಾತ್ರಗಳು ಕೊಟ್ಟ ಸಂತಸವನ್ನು ಪ್ರತಿಯೊಬ್ಬ ಓದುಗನೂ ತನ್ನ ಮನಸ್ಸಿನಲ್ಲಿ ಭದ್ರವಾಗಿ ಇಟ್ಟುಕೊಂಡಿದ್ದಾನೆ.

ಸರಸಮ್ಮನ ಸಮಾಧಿ, ಗೊಂಡಾರಣ್ಯ, ಮೂಜನ್ಮ, ಅಳಿದ ಮೇಲೆ, ಹೆತ್ತಾಳಾ ತಾಯಿ, ಕರುಳಿನ ಕರೆ ಹೀಗೆ ಸದಾ ಕಾಡುವ ಅಸಂಖ್ಯಾತ ಕಾದಂಬರಿಗಳನ್ನು ಕಾರಂತರು ರಚಿಸಿದ್ದರು. ಅವರು ರಚಿಸಿದ ಕಥೆ, ನಾಟಕ, ಪ್ರವಾಸ ಕಥನ ಸೇರಿದಂತೆ ಇನ್ನಿತರ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯ ಲೋಕವನ್ನು ಉನ್ನತದತ್ತ ಕರೆದೊಯ್ದಿದೆ. ಅದರಲ್ಲೂ ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಆತ್ಮಕಥೆ ಪ್ರತಿಯೊಬ್ಬರ ಕೈ ಬೆರಳನ್ನು ಹಿಡಿದು ನಡೆಸಿಕೊಂಡು ಹೋಗುತ್ತದೆ.

ಕನ್ನಡದ ಕಾದಂಬರಿಗಳು ಎಂದೊಡನೆ ಥಟ್ಟನೆ ಶಿವರಾಮ ಕಾರಂತರು ನೆನಪಾಗುತ್ತಾರೆ. ಕಾರಂತರ ಕಾದಂಬರಿಗಳನ್ನು ಓದುತ್ತಾ ತಮ್ಮ ಬದುಕನ್ನು ಶ್ರೀಮಂತ ಗೊಳಿಸಿಕೊಂಡವರಿದ್ದಾರೆ. ತಮ್ಮ ಬದುಕಿನುದ್ದಕ್ಕೂ ಕಾರಂತರ ಕಾದಂಬರಿಗಳನ್ನೇ ಧ್ಯಾನಿಸಿದವರಿದ್ದಾರೆ. ಈ ಕ್ಷಣಕ್ಕೂ ಕಾರಂತರ ಬರೆಹದ ಮೋಡಿಗೆ ಬೆರಗಾಗುತ್ತಿರುವ ಓದುಗರಿದ್ದಾರೆ.

**ಕಾರಂತರಿಗೆ ಒಲಿದ ಪ್ರಶಸ್ತಿಗಳು:** ಶಿವರಾಮ ಕಾರಂತರು ಪ್ರಶಸ್ತಿಯನ್ನು ಮೀರಿ ಬೆಳೆದಿದ್ದವರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಅವರ ಉತ್ಕೃಷ್ಟ ಸಾಧನೆಗಾಗಿ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಸಾಕಷ್ಟು ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿವೆ.

**ಕಾರಂತ ಅಜ್ಜನ ಬಗ್ಗೆ ಇನ್ನಷ್ಟು:** ಕಾರಂತರು ಸದಾ ಹೊಸತನಕ್ಕೆ ತುಡಿಯುತ್ತಿದ್ದವರು. ಬಾಲವನ ಅವರ ವಿಶಿಷ್ಟ ಪ್ರಯೋಗ. ರಾಜಕೀಯ ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದರು. ಪರಿಸರ ಮತ್ತು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಅವರು ಮಾಡಿದ ಕೆಲಸಗಳು ನಿಜಕ್ಕೂ ಶ್ಲಾಘನೀಯ.

ಶಿವರಾಮ ಕಾರಂತರು ತಮ್ಮ 95ನೇ ವಯಸ್ಸಿನಲ್ಲಿ ಅಂದರೆ ಡಿಸೆಂಬರ್ 9, 1997ರಲ್ಲಿ ಉಡುಪಿಯ ಮಣಿಪಾಲ್‌ನಲ್ಲಿ ತೀರಿ ಹೋದರು. ವೃದ್ಧಾಪ್ಯದಲ್ಲೂ ಕಾರಂತರ ಹುಮ್ಮಸ್ಸು ತಗ್ಗಿರಲಿಲ್ಲ. ಸಾಧನೆಗೆ ನಿರ್ದಿಷ್ಟ ನಿಲ್ದಾಣವಿಲ್ಲ ಎಂದು ತೋರಿಸಿಕೊಟ್ಟ 'ಕಾರಂತ ನೀ ಸದಾ ಜೀವಂತ!

## ಎಲ್ಲೋ ಕೇಳಿದ ಕಥೆ

### ಜಾತಿ ದ್ವೇಷ ಸಲ್ಲದು



ಆರಂಭದ ದಿನಗಳಲ್ಲಿ ಸಂಘಕ್ಕೆ ಸೇರಬಯಸುವವರನ್ನು ಡಾ.ಕೇಶವ ಬಲಿರಾಮ ಹೆಡಗೇವಾರ್ ಸ್ವತಃ ಮಾತಾಡಿಸಿ ಸೇರಿಸುವ ರೂಢಿಯಿತ್ತು. ಒಮ್ಮೆ ಈ ಉದ್ದೇಶಕ್ಕಾಗಿ ಅವರನ್ನು ಕಾಣಲು ಬಂದಿದ್ದ ಒಬ್ಬರ ಬಳಿ ಡಾಕ್ಟರ್‌ಜಿ ಮೊದಲು ಹೆಸರು, ವಾಸಸ್ಥಾನ, ಊರು ಇತ್ಯಾದಿ ಕೇಳಿದರು. ಮಾತುಕತೆ ನಡುವೆ ಆ ವ್ಯಕ್ತಿ ತಾನು "ಬ್ರಾಹ್ಮಣೇತರ' ಎಂಬ ಮಾಹಿತಿ ತಿಳಿಸಿದರು. ಆಗ ಡಾಕ್ಟರ್‌ಜಿ "ಆ ಹೆಸರಿನ ಜಾತಿ, ವರ್ಗ ಹಿಂದು ಸಮಾಜದಲ್ಲಿ ಇಲ್ಲವಲ್ಲ. ಆ ರೀತಿಯಲ್ಲಿರುವುದು ಸಾಧ್ಯವೂ ಇಲ್ಲ. ಅತಿ ಹೆಚ್ಚೆಂದರೆ ಕೆಲವರು ತಮ್ಮ ಬಗ್ಗೆ ಆ ರೀತಿಯಲ್ಲಿ ಹೇಳಿಕೊಳ್ಳಬಹುದು. ಆದರೆ ಅದು ಸಹ ತಪ್ಪು. ಹಿಂದು ಸಮಾಜದಲ್ಲಿ ತಾನು ಒಂದು ಪ್ರತ್ಯೇಕ ವರ್ಗವೆಂದು ತಿಳಿಯುವುದು ರಾಷ್ಟ್ರಕ್ಕೆ ಅಪಾಯಕಾರಿ ಪ್ರವೃತ್ತಿ. ಅದರಿಂದ ಆಂತರಿಕ ದ್ವೇಷ ಬೆಳೆದು ಸಮಾಜ ಒಡೆಯುತ್ತದೆ. ಸಮಾಜವನ್ನು ಒಡೆಯುವುದು ರಾಷ್ಟ್ರದ್ರೋಹವಲ್ಲದೆ ಬೇರೇನೂ ಅಲ್ಲ. ಸಂಘವು ಆ ಕೆಲಸಕ್ಕಾಗಿ ಇಲ್ಲ. ನೀವು ಸಂಘದಲ್ಲಿ ಸೇರುವುದಾದಲ್ಲಿ ಮೊದಲು ನಿಮ್ಮ ಚಿಂತನೆಯ ಈ ರೀತಿಯನ್ನು ಬಿಡಬೇಕಾಗುತ್ತದೆ" ಎಂಬುದನ್ನು ವಿವರವಾಗಿ ತಿಳಿಸಿದರು.

ಆದರೆ ಆ ವ್ಯಕ್ತಿ ತನ್ನ ಪಟ್ಟು ಬಿಡಲಿಲ್ಲ. ತನ್ನ ಮಟ್ಟಿಗೆ ತನ್ನ ನಿಲುವೇ ಸರಿಯಾದ ಸಂಗತಿ ಎಂದು ವಾದ ಮುಂದುವರೆಸಿದರು. ಕೊನೆಗೆ ಡಾಕ್ಟರ್‌ಜಿಯವರು "ನಾವು ನಿಮ್ಮ ಜಾತಿಯನ್ನು ಕೇಳಿಯೇ ಇಲ್ಲ. ಆದರೂ ನೀವು ಹಿಂದು ಸಮಾಜದಲ್ಲಿನ ಯಾವುದೋ ಒಂದು ಜಾತಿಯ ಬಗ್ಗೆ ವಿರೋಧ ತಳೆದಿರುವುದು ಗೊತ್ತಾಗುತ್ತದೆ. ಸಂಘವಾದರೋ ಸಮಸ್ತ ಹಿಂದುಗಳನ್ನು ಸಮಾನವಾಗಿ ಕಾಣುವಂತಹ ಸಂಘಟನೆ. ಯಾವುದೋ ಒಂದು ಜಾತಿಯನ್ನು ದ್ವೇಷಿಸುವುದನ್ನು ಸಂಘವು ಒಪ್ಪುವುದಿಲ್ಲ. ಇಲ್ಲಿ ಜಾತಿದ್ವೇಷಕ್ಕೆ ಅವಕಾಶವಿಲ್ಲ' ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರು.

## ಸೇವಾಗಂಗೆಯಲ್ಲಿ ಮಿಂದೆದ್ದ ಸೇವಿಕೆಯರು

ಅದು ಏಪ್ರಿಲ್ 2021ರ ಸಮಯ. ಕೋವಿಡ್‌ನ ಸೋಂಕಿನ ಭೀತಿಯಿಂದಾಗಿ ಜನರು ಮನೆಯಲ್ಲೇ ಭಯಭೀತರಾಗಿ ಕುಳಿತಿದ್ದ ಸಮಯ. ಕೊರೋನಾಗೆ ತುತ್ತಾಗಿ ಮೃತರಾದವರ ಅಂತ್ಯಸಂಸ್ಕಾರಕ್ಕೆ ಅವರ ಕುಟುಂಬದವರೇ ಸಿದ್ಧರಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಗುಜರಾತಿನ ಕಚ್‌ನ ಸುಖಪಾರ್ ಗ್ರಾಮದ ಹೀನಾ ವೆಲಾನಿ, ರಿಂಕು ವೆಕರಿಯಾ, ಸುಮಿತಾ ಭುಡಿಯಾ, ತುಳಸಿ ವೆಲಾನಿ ಸೇರಿದಂತೆ ರಾಷ್ಟ್ರ ಸೇವಿಕಾ ಸಮಿತಿಯ 10 ಸಹೋದರಿಯರು ಸ್ಮಶಾನವನ್ನು ಸ್ವಚ್ಛಗೊಳಿಸುವ, ಅಂತ್ಯಕ್ರಿಯೆಯ ಚಿತಾಗಾರವನ್ನು ಸಜ್ಜುಗೊಳಿಸುವುದರಿಂದ ಹಿಡಿದು ಪಿಪಿಇ ಕಿಟ್ ಧರಿಸಿ ಅಂತಿಮ ವಿದಾಯ ಹೇಳುವವರೆಗೂ ಕಾರ್ಯ ನಿರ್ವಹಿಸುವ ಅದ್ಭುತ ಧೈರ್ಯವನ್ನು ತೋರಿದರು.

ಕುಟುಂಬಸ್ಥರೂ ತಯಾರಿಲ್ಲದ ಹಾಗೂ ಸರ್ಕಾರಿ ನೌಕರರು ಹೆಚ್ಚು ಇಲ್ಲದ ಕಾರಣ, ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ದೇಹಗಳ ಅಂತ್ಯಕ್ರಿಯೆ ನಡೆಸುವ ನಿಟ್ಟಿನಿಂದ, 15 ಏಪ್ರಿಲ್ 2021ರ ಸಂಜೆ ಸಂಘದ ಸ್ವಯಂಸೇವಕರಾದ ರಾಮ್ ಜೀ ವೆಲಾನಿ ಅವರಿಗೆ ಸ್ವಯಂಸೇವಕರ ಸಹಾಯ ಬೇಕಿದೆ ಎಂದು, ಭುಜ್ ತಾಲೂಕಿನ ಅಭಿವೃದ್ಧಿ ಅಧಿಕಾರಿಯಿಂದ ದೂರವಾಣಿ ಕರೆ ಬಂದಾಗ ಈ ಪ್ರಕ್ರಿಯೆ ಪ್ರಾರಂಭವಾಯಿತು. ಆಗ ಅಲ್ಲಿನ ಸಂಘದ ಕಾರ್ಯಕರ್ತರೆಲ್ಲ ಸೇರಿ ಒಂದು ತಂಡವನ್ನು ಮಾಡಿಕೊಂಡಾಗ ರಾಮ್ ಜೀ ವೆಲಾನಿ ಅವರ ಮಗಳಾದ ಹೀನಾ, ತಾನೂ ಕೂಡ ಈ ಕಾರ್ಯದಲ್ಲಿ ಕೈ ಜೋಡಿಸುವ ಆಸಕ್ತಿ ತೋರಿಸಿದಳು. ಹೀನಾಳ ಜೊತೆಗೆ ರಾಷ್ಟ್ರ ಸೇವಿಕಾ ಸಮಿತಿಯ ಇನ್ನೂ 9 ಜನ ಸೇವಿಕೆಯರು ಬಂದಿದ್ದರು.

ರಾಷ್ಟ್ರ ಸೇವಿಕಾ ಸಮಿತಿ ಸೌರಾಷ್ಟ್ರ ಪ್ರಾಂತದ ಪ್ರಾಂತ ಪ್ರಚಾರ ಪ್ರಮುಖರಾದ ಹೀನಾ ದೀದಿ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ನಾವು 3–3ಜನರ ತಂಡ ಮಾಡಿಕೊಂಡೆವು. ನಿಯಮಿತವಾಗಿ ಸ್ಮಶಾನವನ್ನು ಸ್ವಚ್ಛಗೊಳಿಸಿವುದರಿಂದ ಹಿಡಿದು, ಕಕಇ ಕಿಟ್ ಧರಿಸಿ ಅಂತಿಮ ಸಂಸ್ಕಾರ ಮಾಡುವವರೆಗೆ ಯಾವ ತೊಂದರೆಯು ಆಗಲಿಲ್ಲ. ಹಳ್ಳಿಯ ಜನರ ಸಹಕಾರವೂ ಸಂಪೂರ್ಣವಾಗಿ ದೊರೆಯಿತು. ಅಂತ್ಯಸಂಸ್ಕಾರಕ್ಕೆ ಬೇಕಾದ ಕಟ್ಟಿಗೆ, ತುಪ್ಪ, ಕರ್ಪೂರವನ್ನು ಒದಗಿಸಿದರು.



ಅದು ಲಾಕ್‌ಡೌನಿನ ಸಮಯವಾಗಿತ್ತು. ಭುಜ್‌ನ ಆಸ್ಪತ್ರೆ ಮತ್ತು ಹತ್ತಿರದ ಹಳ್ಳಿಗಳ ಎಲ್ಲಾ ಮೃತ ದೇಹಗಳ ಅಂತಿಮ ವಿಧಿಗಳನ್ನು ಸುಖ್‌ಪರ್‌ನ ಸ್ಮಶಾನದಲ್ಲೇ ಮಾಡಲಾಗುತ್ತಿತ್ತು. ಸುಮಾರು 45 ದಿನಗಳ ಕಾಲ ನಡೆದ ಈ ಅಭಿಯಾನದಲ್ಲಿ 450ಕ್ಕೂ ಹೆಚ್ಚು ಮೃತ ದೇಹಗಳನ್ನು ಸ್ವಯಂಸೇವಕರ ಬಳಗ ಹಾಗೂ ಸಮಿತಿಯ ಸಹೋದರಿಯರು ಗೌರವಯುತವಾಗಿ ಬೀಳ್ಕೊಟ್ಟರು.


ಯಾವಾಗ ಕೆಲಸ ನಿಧಾನವಾಗಿ ಸಾಗತೊಡಗಿತೋ, ಆಗ ಹಲವು ಯುವಕರು ಕೈ ಜೋಡಿಸಿದರು. ಆಗ ಈ ಎಲ್ಲಾ ಸ್ವಯಂಸೇವಿಕೆಯರು ಅನ್ನಪೂರ್ಣೆಯರಾದರು. ಕ್ವಾರಂಟೈನ್‌ನಲ್ಲಿದ್ದ ಜನರಿಗೆ ಊಟದ ವ್ಯವಸ್ಥೆಯ ಜವಾಬ್ದಾರಿ ವಹಿಸಿಕೊಂಡರು. ಒಂಟಿಯಾಗಿದ್ದ ಅಸಹಾಯಕ ವೃದ್ಧರ ಮನೆಗೆ ಹಣ್ಣು–ಹಂಪಲು, ಊಟದ ವ್ಯವಸ್ಥೆಯಿಂದ ಹಿಡಿದು ಅವರಿಗೆ ಔಷಧಿಗಳನ್ನು ಒದಗಿಸುವ ಕೆಲಸವನ್ನೂ ಮಾಡಿದರು. ಸಾನಿಟೈಸರ್‌ನ ಜೊತೆಗೆ ಮಾಸ್ಕ್‌ಗಳನ್ನೂ ತಯಾರು ಮಾಡಿ ಮನೆ ಮನೆಗೆ ಹೋಗಿ ವಿತರಿಸಿದರು. ಇದರ ಜೊತೆಯಲ್ಲೇ ಪೊಲೀಸರಿಗೆ ಎಲ್ಲಾ ರೀತಿಯ ನೆರವು ನೀಡಿದರು ರಾಷ್ಟ್ರ ಸೇವಿಕಾ ಸಮಿತಿಯ ಈ ಭಗಿನಿಯರು.

ಸಂಘದಲ್ಲಿ ದೊರೆಯುವ ಕೌಟುಂಬಿಕ ಸಂಸ್ಕಾರಗಳು ಹಾಗೂ ಸಮಿತಿಯ ಪ್ರಶಿಕ್ಷಣ ವರ್ಗದಿಂದ ದೊರೆತ ಶಿಕ್ಷಣದಿಂದಾಗಿ ಎಲ್ಲವೂ ಸಾಧ್ಯವಾಗಿದೆ ಎಂಬ ಒಂದೇ ಉತ್ತರವಿತ್ತು. ಅದಕ್ಕಾಗಿಯೇ "ಸಂಘೇ ಶಕ್ತಿಃ ಕಲೌ ಯುಗೇ" ಎಂದು ಹೇಳಲಾಗುತ್ತದೆ.

## ಮರೆಯಬಾರದ ಇತಿಹಾಸಾಧ್ಯಾಯಗಳು

ಪುಸ್ತಕ ಪರಿಚಯ

**ಲೇಖಕರು:** ಎಸ್ ಆರ್ ರಾಮಸ್ವಾಮಿ
**ಪ್ರಕಟಣೆ:** ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ:** 100




ಇತಿಹಾಸ ವ್ಯಾಸಂಗದಿಂದ ಪ್ರಯೋಜನವಾಗಬೇಕಾದರೆ ರಾಜಕೀಯ ಸ್ಥಿತ್ಯಂತರಗಳ ಕಥನವಷ್ಟೇ ಸಾಕಾಗುವುದಿಲ್ಲ. ಆ ಘಟನಾವಳಿಗಳ ವಿಸ್ತೃತ ಹಿನ್ನೆಲೆಯ ಮತ್ತು ಜನಸಮುದಾಯಗಳ ಮೇಲೆ ಅವುಗಳ ಪರಿಣಾಮಸರಣಿಗಳ ಅರಿವೂ ಅವಶ್ಯವಾಗುತ್ತದೆ. ರಾಜಕೀಯಪ್ರಧಾನ ಕಥನದೊಡನೆ ಅಲ್ಪಪರಿಚಿತ ಆಯಾಮಗಳನ್ನೂ ಪರಿಚಯಿಸುವ ಆಶಯದವು ಈ ಗ್ರಂಥದೊಳಗಿನ ಪ್ರಬಂಧಗಳು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತಮತವಿಸ್ತಾರಕರಿಂದ ಜಗತ್ತಿನಲ್ಲಿ ನಡೆದ ಕ್ರೌರ್ಯಸರಣಿಗಳು; ಹದಿನೆಂಟನೇ ಶತಮಾನದ ಸಂನ್ಯಾಸಿ ಆಂದೋಲನ; ಇಪ್ಪತ್ತನೇ ಶತಮಾನದ ಆರಂಭಕಾಲದ ಕೋಮಗಾತ ಮರು ದುರಂತ; ಇಪ್ಪತ್ತನೇ ಶತಮಾನದ ಆರಂಭದಶಕಗಳಲ್ಲಿ ವೈಚಾರಿಕಕ್ಷೇತ್ರದಲ್ಲಿ ನಡೆದ ಸ್ವಾತಂತ್ರ್ಯಾಭಿಮುಖ ಪ್ರಯಾಸಗಳು; ಎರಡು ಮಹಾಯುದ್ಧಗಳು ಮೈಲಿಗಲ್ಲುಗಳೆನಿಸಿರುವ ಈ ಹಲವು ಇತಿಹಾಸಖಂಡಗಳನ್ನು ಕುರಿತ ವಿಶ್ಲೇಷಣಾತ್ಮಕ ಪ್ರಬಂಧಗಳ ಸಂಕಲನ – 'ಮರೆಯಬಾರದ ಇತಿಹಾಸಾಧ್ಯಾಯಗಳು'

ವೆಬ್‌ಸೈಟ್: https://www.sahityabooks.com

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘಾ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ

### ಶಾಂತಿನಿಕೇತನ ಯುನೆಸ್ಕೋ ಪಾರಂಪರಿಕ ಪಟ್ಟಿಗೆ ಸೇರ್ಪಡೆ



1901 ರಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರ್ ಅವರ ತಂದೆ ಮಹರ್ಷಿ ದೇಬೇಂದ್ರನಾಥ ಟ್ಯಾಗೋರ್ ಸ್ಥಾಪಿಸಿದ ಶಾಂತಿನಿಕೇತನವನ್ನು ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರಿಸಲಾಗಿದೆ. ಸೌದಿ ಅರೇಬಿಯಾದಲ್ಲಿ ನಡೆದ ವಿಶ್ವ ಪರಂಪರೆ ಸಮಿತಿಯ 45ನೇ ಅಧಿವೇಶನದಲ್ಲಿ ಶಾಂತಿನಿಕೇತನವನ್ನು ಪಟ್ಟಿಗೆ ಸೇರಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

### ಸಮುದ್ರಯಾನ ಮಿಷನ್‌ಗೆ ಸಜ್ಜಾಗುತ್ತಿದೆ ಭಾರತ


ಭಾರತವು ತನ್ನ ಮಹತ್ವಾಕಾಂಕ್ಷೆಯ ಸಬ್‌ಮರ್ಸಿಬಲ್ ಸಮುದ್ರಯಾನವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸಮುದ್ರಯಾನವನ್ನು ಚೆನ್ನೈನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷನ್ ಟೆಕ್ನಾಲಜಿ (NIOT) ಅಭಿವೃದ್ಧಿಪಡಿಸುತ್ತಿದೆ. ಇದು ಭಾರತದ ಮೊದಲ ಮಾನವಸಹಿತ ಸಾಗರ ಪರಿಶೋಧನಾ ಕಾರ್ಯಾಚರಣೆಯಾಗಿದೆ. NIOT ಚೆನ್ನೈ ಅಭಿವೃದ್ಧಿಪಡಿಸುತ್ತಿರುವ ಸಮುದ್ರಯಾನ ಮಿಷನ್‌ನ 'ಸಾಗರ ಕ್ರಾಫ್ಟ್ ಮತ್ಸ್ಯ 6000' ಮುಂದಿನ ವರ್ಷ ಬಂಗಾಳ ಕೊಲ್ಲಿಯಲ್ಲಿ ಮುಳುಗಲಿದೆ. ಸಾಗರ ಕ್ರಾಫ್ಟ್‌ನ ಹೆಸರಿನಲ್ಲಿರುವ 6000 ಸಂಖ್ಯೆಯು ಸಬ್‌ಮರ್ಸಿಬಲ್ ನೌಕೆ 6000 ಮೀಟರ್‌ಗಳಷ್ಟು ನೀರಿನೊಳಗೆ ಹೋಗುವ ಸಾಮರ್ಥ್ಯವನ್ನು ಹೊಂದಿದೆ.

### 100 ಹೊಸ ಸೈನಿಕ ಶಾಲೆಗಳ ಸ್ಥಾಪನೆಗೆ ರಾಜನಾಥ್ ಅನುಮೋದನೆ

ಭಾರತ ಸರ್ಕಾರವು 6ನೇ ತರಗತಿಯಿಂದ ಪ್ರಾರಂಭವಾಗುವ ವರ್ಗವಾರು ಶ್ರೇಣಿಯ ರೀತಿಯಲ್ಲಿ NGOಗಳು/ಖಾಸಗಿ ಶಾಲೆಗಳು/ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ 100 ಹೊಸ ಸೈನಿಕ ಶಾಲೆಗಳನ್ನು ಸ್ಥಾಪಿಸುವ ಉಪಕ್ರಮವನ್ನು ಅನುಮೋದಿಸಿದೆ. ಈ ಉಪಕ್ರಮದ ಅಡಿಯಲ್ಲಿ, ದೇಶಾದ್ಯಂತ ಇರುವ 19 ಹೊಸ ಸೈನಿಕ ಶಾಲೆಗಳೊಂದಿಗೆ ಸೈನಿಕ್ ಸ್ಕೂಲ್ಸ್ ಸೊಸೈಟಿಯು ಒಪ್ಪಂದಕ್ಕೆ (MoA) ಸಹಿ ಹಾಕಿದೆ. ಇದು ಸಶಸ್ತ್ರ ಪಡೆಗಳಿಗೆ ಸೇರುವುದು ಸೇರಿದಂತೆ ವಿದ್ಯಾರ್ಥಿಗಳಿಗೆ ಉತ್ತಮ ವೃತ್ತಿ ಅವಕಾಶಗಳನ್ನು ನೀಡುತ್ತದೆ.

## ಸಾಲುದ್ದದ ಸುದ್ದಿಗಳು

### ವಿಶ್ವ ದರ್ಜೆಯ ಸಮಾವೇಶ ಕೇಂದ್ರ 'ಯಶೋಭೂಮಿ' ಉದ್ಘಾಟನೆ



ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯ ದ್ವಾರಕದಲ್ಲಿ ವಿಶ್ವದರ್ಜೆಯ ಸಮಾವೇಶ ಕೇಂದ್ರವಾದ 'ಯಶೋಭೂಮಿ' ಯನ್ನು ಲೋಕಾರ್ಪಣೆಗೊಳಿಸಿದರು. ಯಶೋಭೂಮಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಭೆ, ಸಮಾರಂಭ, ಸಮ್ಮೇಳನ ಹಾಗೂ ಪ್ರದರ್ಶನವನ್ನು ಆಯೋಜಿಸಬಹುದು. ಬೃಹತ್ ವಸ್ತುಪ್ರದರ್ಶನ ಸಭಾಂಗಣಗಳು ಸೇರಿದಂತೆ ವಿಶ್ವದರ್ಜೆಯ ಸೌಲಭ್ಯ ಕಲ್ಪಿಸಲಾಗಿದೆ. 73 ಸಾವಿರ ಚದರ ಮೀಟರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಸಮಾವೇಶ ಕೇಂದ್ರ ನಿರ್ಮಿಸಲಾಗಿದೆ. ಇದರಲ್ಲಿ 15 ಸಮಾವೇಶದ ಕೊಠಡಿಗಳಿವೆ. ಮುಖ್ಯ ಸಭಾಂಗಣ ಹಾಗೂ ದೊಡ್ಡದಾದ ನೃತ್ಯ ಮಂದಿರ ಇದೆ. 11 ಸಾವಿರ ಪ್ರತಿನಿಧಿಗಳು ಏಕಕಾಲಕ್ಕೆ ಸಭೆ ನಡೆಸಲು ಅನುಕೂಲವಾಗುವಂತಹ 13 ಸಭಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಸಮಾವೇಶ ಕೇಂದ್ರದ ಮುಂಭಾಗ ದೇಶದಲ್ಲಿಯೇ ಅತಿದೊಡ್ಡ ಎಲ್‌ಇಡಿ ಪರದೆ ಅಳವಡಿಸಲಾಗಿದೆ

### 108 ಅಡಿ ಎತ್ತರದ ಶಂಕರಾಚಾರ್ಯರ ಪ್ರತಿಮೆ ಅನಾವರಣ



ಮಧ್ಯಪ್ರದೇಶ ರಾಜ್ಯದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು, ಶಿವನ 12 ಜ್ಯೋತಿರ್ಲಿಂಗಗಳಲ್ಲಿ ಒಂದನ್ನು ಹೊಂದಿರುವ ಪವಿತ್ರ ದೇವಾಲಯದ ಪಟ್ಟಣವಾದ ಓಂಕಾರೇಶ್ವರದಲ್ಲಿ ಸೆಪ್ಟೆಂಬರ್ 18 ರಂದು ಆದಿ ಶಂಕರಾಚಾರ್ಯರ 108 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ಈ ಪ್ರತಿಮೆಯನ್ನು 8ನೇ ಶತಮಾನದ ದಾರ್ಶನಿಕ ಶಂಕರಾಚಾರ್ಯರಿಗೆ ಗೌರವವನ್ನು ಸಲ್ಲಿಸುವ 'ಏಕಾತ್ಮತಾ ಕಿ ಪ್ರತಿಮಾ' ಅಥವಾ 'ಏಕತ್ವದ ಪ್ರತಿಮೆ' ಎಂದು ಹೆಸರಿಸಲಾಗಿದೆ.

### ಪಿಎಂ ವಿಶ್ವಕರ್ಮ ಯೋಜನೆಗೆ ಚಾಲನೆ.

'ವಿಶ್ವಕರ್ಮ ಜಯಂತಿ'ಯಂದು ಪ್ರಧಾನಿ ನರೇಂದ್ರ ಮೋದಿ ಅವರು 13,000 ಕೋಟಿ ರೂ.ಗಳ 'ಪಿಎಂ ವಿಶ್ವಕರ್ಮ' ಯೋಜನೆಗೆ ಚಾಲನೆ ನೀಡಿದರು. ಈ ಯೋಜನೆ ಅಡಿಯಲ್ಲಿ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಕನಿಷ್ಠ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಅಡಿ ನೇಕಾರರು, ಅಕ್ಕಸಾಲಿಗರು, ಕಮ್ಮಾರರು, ಲಾಂಡ್ರಿ ಕಾರ್ಮಿಕರು ಮತ್ತು ಕ್ಷೌರಿಕರು ಸೇರಿದಂತೆ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ಕರಕುಶಲತೆಯಲ್ಲಿ ತೊಡಗಿರುವ ಸುಮಾರು 30 ಲಕ್ಷ ಕುಟುಂಬಗಳಿಗೆ ಶೇ. 5 ರಷ್ಟು ರಿಯಾಯಿತಿ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ.

## ಬುಡಕಟ್ಟು ಮಕ್ಕಳ ವಿದ್ಯಾಭ್ಯಾಸದ ಹಾದಿ ಸುಗಮಗೊಳಿಸಿದ ಶಿಕ್ಷಕಿ ಅರ್ಚನಾ ನೂಗುರಿ

ಪ್ರೇರಣಾ

ಅರ್ಚನಾ ನೂಗುರಿ ಅವರು 20 ವರ್ಷಗಳಿಂದ ತೆಲಂಗಾಣದ ಮಂಚೇರಿಯಾದ ರೆಬ್ಬೆನಪಲ್ಲಿಯಲ್ಲಿರುವ ಮಂಡಲ ಪರಿಷತ್ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು ಇವರು ತೆಲುಗು, ಇಂಗ್ಲಿಷ್ ಮತ್ತು ಗಣಿತವನ್ನು ಕಲಿಸುತ್ತಿದ್ದಾರೆ. ಇವರಿಗೆ ಚಿಕ್ಕಂದಿನಿಂದ ಜೀವನದಲ್ಲಿ ಒಂದೇ ಗುರಿಯನ್ನು ಹೊಂದಿದ್ದರು – ಅದು ಶಿಕ್ಷಕಿಯಾಗಬೇಕು ಎಂದು. 19ನೇ ವಯಸ್ಸಿನಲ್ಲೇ ಇವರು ಶಿಕ್ಷಕ ತರಬೇತಿಯನ್ನು ಮುಗಿಸಿ ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡಲು ಪ್ರಾರಂಭಿಸಿದರು. 5 ಸೆಪ್ಟೆಂಬರ್ 2023 ರಂದು, ಅವರು ನವದೆಹಲಿಯ ವಿಜ್ಞಾನ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಯನ್ನು ಪಡೆದರು. ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಿದ ಮತ್ತು ಅವರ ವಿದ್ಯಾರ್ಥಿಗಳ ಜೀವನದಲ್ಲಿ ಬದಲಾವಣೆಯನ್ನು ತಂದ ದೇಶದ ಅತ್ಯುತ್ತಮ ಶಾಲಾ ಶಿಕ್ಷಕರಿಗೆ ಶಿಕ್ಷಣ ಸಚಿವಾಲಯವು ಈ ಪ್ರಶಸ್ತಿಗಳನ್ನು ನೀಡುತ್ತದೆ. ಈ ಪ್ರಶಸ್ತಿಯು ಶಿಕ್ಷಕ ವೃತ್ತಿಯಲ್ಲಿ ಅವರ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯ ಪ್ರತೀಕವಾಗಿದೆ.

42 ವರ್ಷದ ಈ ಮುಖ್ಯೋಪಾಧ್ಯಾಯಿನಿ ಮೊದಲು ತೆಲಂಗಾಣದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಕೆಲವೇ ವಿದ್ಯಾರ್ಥಿಗಳೊಂದಿಗೆ ಒಂದು ಸಣ್ಣ ಕಲಿಕಾ ಕೇಂದ್ರವನ್ನು, ಕಲಿಕೆಯ ಬೃಹತ್ ಮಹಾದೇಗುಲವಾಗಿ ಪರಿವರ್ತಿಸಿ ವಿವಿಧ ಪಠ್ಯೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾಗಿದ್ದಾರೆ.

ರೆಬ್ಬೆನಪಲ್ಲಿ ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು ಸಾಕಷ್ಟು ಸವಾಲುಗಳನ್ನು ಈ ಗ್ರಾಮದವರು ಎದುರಿಸುತ್ತಿದ್ದರು. ನವೆಂಬರ್ 2000ರಲ್ಲಿ ಅರ್ಚನಾರವರು ಇಲ್ಲಿ ಶಾಲೆಗೆ ಸೇರಿದಾಗ ಕೇವಲ 34 ವಿದ್ಯಾರ್ಥಿಗಳಿದ್ದರು. ಮಂಚೇರಿಯಲ್ ಜಿಲ್ಲೆಯವರಾದ ಇವರಿಗೆ ಸ್ಥಳೀಯರು ಎದುರಿಸುತ್ತಿರುವ ತೊಂದರೆಗಳ ಅರಿವು ಬಹಳ ಚೆನ್ನಾಗಿಯೇ ಇತ್ತು ಮತ್ತು ಸ್ಥಳೀಯರು ತಮ್ಮ ಮಕ್ಕಳನ್ನು ಶಾಲೆಗೆ ಏಕೆ ಕಳುಹಿಸುತ್ತಿಲ್ಲ ಎಂಬುದನ್ನೂ ಸಹ ತಿಳಿದಿದ್ದರು. ಈ ವಿದ್ಯಾರ್ಥಿಗಳು ಪ್ರತಿದಿನ ಶಾಲೆಗೆ ಬರುವಂತೆ ಮಾಡಲು ಶಿಕ್ಷಣದ ಪರಿವರ್ತಕ ಶಕ್ತಿಯನ್ನು ಉಪಯೋಗಿಸಲು ಅವರು ಬಯಸಿದ್ದರು.

ಈ ಗ್ರಾಮದಲ್ಲಿ ಕೆಲವು ಬುಡಕಟ್ಟು ಕುಗ್ರಾಮಗಳಿವೆ. ಅರಣ್ಯದಿಂದ ಕಚ್ಚಾ ವಸ್ತುಗಳನ್ನು ಸಂಗ್ರಹಿಸುವುದೇ ಇಲ್ಲಿನ ನಿವಾಸಿಗಳ ಉದ್ಯೋಗ. ಪಕ್ಕಾ ರಸ್ತೆಯೂ ಇಲ್ಲದ ಕಾರಣ ಈ ಕುಗ್ರಾಮಗಳಿಗೆ ಸಾರಿಗೆ ಸೌಲಭ್ಯವಿರಲಿಲ್ಲ. ಈ ಮಕ್ಕಳು ಶಾಲೆಗೆ ಬರುವಂತೆ ನೋಡಿಕೊಳ್ಳುವುದು ಅರ್ಚನಾರವರ ಮೊದಲ ಧ್ಯೇಯವಾಗಿತ್ತು.

ಅರ್ಚನಾರವರು ಆ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯದಲ್ಲಿ ತೊಡಗಿದರು. ಅವರು ಆ ಬುಡಕಟ್ಟು ಕುಗ್ರಾಮಗಳಿಗೆ ಭೇಟಿ ನೀಡಲು ಪ್ರಾರಂಭಿಸಿದರು ಮತ್ತು ಪೋಷಕರೊಂದಿಗೆ ಮಾತನಾಡಿದರು. ಆದರೆ ಪೋಷಕರು ಒಪ್ಪಲಿಲ್ಲ. ಅವರಿಗೆ ಮನವರಿಕೆ ಮಾಡಿಕೊಡಲು 15 ದಿನಗಳಿಗೊಮ್ಮೆ ಅವರನ್ನು ಭೇಟಿ ಮಾಡುತ್ತಿದ್ದರು. ಶಿಕ್ಷಣ ಎಷ್ಟು ಅತ್ಯಗತ್ಯ ಮತ್ತು ಅದು ಅವರ ಮಕ್ಕಳಿಗೆ ಉತ್ತಮ ಜೀವನ ನಡೆಸಲು ಹೇಗೆ ಸಹಾಯ ಮಾಡುತ್ತದೆ ಎಂಬುದರ ಬಗ್ಗೆ ಅವರಿಗೆ ತಿಳಿಸಲು ಪ್ರಾರಂಭಿಸಿದರು. ಇದರ ಫಲವಾಗಿ ವಿದ್ಯಾರ್ಥಿಗಳು ಶಾಲೆಗೆ ಬರಲು ಪ್ರಾರಂಭಿಸಿದರು. ಆದರೆ ಅಲ್ಲಿಗೆ ಸಂಚಾರ ಸೌಲಭ್ಯಗಳು ಇಲ್ಲವಾದರಿಂದ ವಿದ್ಯಾರ್ಥಿಗಳು ಶಾಲೆಗೆ ಬರುವುದನ್ನು ನಿಲ್ಲಿಸಿದರು. ಈ ಸಮಸ್ಯೆಗಳನ್ನು ಪರಿಹರಿಸಲು ಅರ್ಚನಾರವರು ತಮ್ಮ ಸ್ವಂತ ಖರ್ಚಿನಲ್ಲಿ ಆಟೋ ವ್ಯವಸ್ಥೆ ಮಾಡಿದರು. ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಅವರ ಅವಿರತ ಪ್ರಯತ್ನಗಳ ಮೂಲಕ, 103 ಹುಡುಗಿಯರು ಸೇರಿದಂತೆ ಶಾಲೆಯ ಸಂಖ್ಯೆಯನ್ನು 275 ವಿದ್ಯಾರ್ಥಿಗಳಷ್ಟು ಹೆಚ್ಚಿಸಿದ್ದರು.

ಇದಲ್ಲದೆ, ಅವರು ತಮ್ಮ ಹಿರಿಯ ವಿದ್ಯಾರ್ಥಿಗಳು, ಎನ್‌ಜಿಒಗಳ ಸಹಕಾರದಿಂದ ಶಾಲೆಯ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿಯೂ ಕೆಲಸ ಮಾಡಿದರು. ಇದರಿಂದ ಬೋರ್‌ವೆಲ್, ಶುದ್ಧೀಕರಿಸಿದ ವಾಟರ್ ಪ್ಲಾಂಟ್, ಪೀಠೋಪಕರಣಗಳನ್ನು ಖರೀದಿಸಲು ಸಾಧ್ಯವಾಯಿತು. ಮುಖ್ಯವಾಗಿ




1000 ಪುಸ್ತಕಗಳೊಂದಿಗೆ ಸುಂದರವಾದ ಗ್ರಂಥಾಲಯವನ್ನು ಅವರ ಸಹಾಯದಿಂದ ನಿರ್ಮಿಸಿದರು.

2004ರಲ್ಲಿ ಡಿಜಿಟಲ್ ತಂತ್ರಜ್ಞಾನ ಮತ್ತು ಕೇಂದ್ರ ಸರ್ಕಾರದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT) ಉಪಕ್ರಮದ ಮೂಲಕ ಕಲಿಕೆಯನ್ನು ಹೆಚ್ಚು ಆಸಕ್ತ ಪಡಿಸಲು, ಐದು ಕಂಪ್ಯೂಟರ್‌ಗಳು, ಎರಡು ಎಲ್‌ಇಡಿ ಪ್ರೊಜೆಕ್ಟರ್‌ಗಳು ಮತ್ತು ಎರಡು ಹೆಚ್ಚುವರಿ ತರಗತಿ ಕೊಠಡಿಗಳ ವ್ಯವಸ್ಥೆ ಮಾಡಿದರು. ತಮ್ಮ ವಿದ್ಯಾರ್ಥಿಗಳು ಈಗ ಕಂಪ್ಯೂಟರ್ ಬಳಸಲು ಸಮರ್ಥರಾಗಿದ್ದಾರೆ ಎಂದು ಅರ್ಚನಾ ಅವರು ಹೆಮ್ಮೆಯಿಂದ ಹೇಳುತ್ತಾರೆ.

ಕೇವಲ ಪುಸ್ತಕದ ಜ್ಞಾನವಿದ್ದರೆ ಸಾಕಾಗುವುದಿಲ್ಲ. ವಿದ್ಯಾರ್ಥಿಗಳು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಬೇಕೆಂದು ಬಯಸುವ ಅರ್ಚನಾರವರು ವಿದ್ಯಾರ್ಥಿಗಳ ಜೀವನದಲ್ಲಿ ಕ್ರೀಡೆಗೆ ಮಹತ್ವನ್ನು ನೀಡಿದ್ದಾರೆ. ವಿದ್ಯಾರ್ಥಿಗಳಿಗೆ ಕರಾಟೆ ಮತ್ತು ನೃತ್ಯ ತರಗತಿ ಏರ್ಪಡಿಸಿದ್ದಾರೆ. ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕರಾಟೆ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಪೋಷಕರ ಕೋರಿಕೆಯ ಮೇರೆಗೆ ಅರ್ಚನಾ ಅವರು 2016 ರಲ್ಲಿ ಶಾಲೆಯಲ್ಲಿ ಇಂಗ್ಲಿಷ್ ಅನ್ನು ಶಿಕ್ಷಣ ಮಾಧ್ಯಮವಾಗಿ ಪರಿಚಯಿಸಿದರು. ಇದು ತಮ್ಮ ಜಿಲ್ಲೆಯ ಮೊದಲ ಇಂಗ್ಲಿಷ್ ಮಾಧ್ಯಮ ಸರ್ಕಾರಿ ಪ್ರಾಥಮಿಕ ಶಾಲೆಯಾಗಿದೆ ಎಂದು ಅವರು ಹೇಳುತ್ತಾರೆ.

ಅರ್ಚನಾರವರು ಹಲವಾರು ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಾ ನವೀನ ಶಿಕ್ಷಣ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಮತ್ತು ಇತ್ತೀಚಿನ ಪ್ರಗತಿಗಳ ವಿಚಾರ ಮುಟ್ಟಲು ಅವರಿಗೆ ಸಹಾಯ ಮಾಡುತ್ತಾರೆ. ಅವರು ಮಂಚೇರಿಯಲ್ 2017 ಮತ್ತು 2018 ರಲ್ಲಿ ಶಿಕ್ಷಕಿಯಾಗಿ ಕಲಿತ ಕಲಿಕೆಯ ಆಧಾರದ ಮೇಲೆ ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಎರಡು ಪತ್ರಿಕೆಗಳನ್ನು ಪ್ರಕಟಿಸಿದ್ದಾರೆ. ಅವರು ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಮೂಲಕ ಭಾರತವನ್ನು ಪರಿವರ್ತಿಸುವ ಪುಸ್ತಕವನ್ನು ಸಹ ಬರೆದಿದ್ದಾರೆ.

ಮೂಲ: ದಿ ಬೆಟರ್ ಇಂಡಿಯಾ

ಪುಂಗವ PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th SEPTEMBER 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-10-2023



## ಸಮೃದ್ಧ ಭಾರತ ನಿರ್ಮಾಣಕ್ಕೆ ಜೊತೆಯಾಗಿ ಕೆಲಸ ಮಾಡೋಣ: ಡಾ.ಮನಮೋಹನ್ ವೈದ್ಯ

**ಪುಣೆ:** ಸಂಘಕಾರ್ಯ ವಿಸ್ತಾರದ ದೃಷ್ಟಿಯಿಂದ ಪ್ರಾರಂಭವಾದ 35–36 ಸಂಘಟನೆಗಳು ಸ್ವಾಯತ್ತ ಸಂಘಟನೆಗಳು. ಅವುಗಳ ನಿರ್ಣಯ ಪ್ರಕ್ರಿಯೆ ಸ್ವತಂತ್ರವಾಗಿರುತ್ತದೆ. ಸಮಾಜ ಜೀವನದಲ್ಲಿ ಕೆಲಸ ಮಾಡುವ ಈ ಸಂಘಟನೆಗಳ ಕಾರ್ಯಕರ್ತರಿಗೆ ಅನೇಕ ಅನುಭವಗಳು, ತಮ್ಮ ಕ್ಷೇತ್ರದಲ್ಲಿ ಗುರುತಿಸಿದ ಅಂಶಗಳು ಲಭ್ಯವಾಗುತ್ತವೆ. ಅವುಗಳ ಕುರಿತು ಪರಸ್ಪರ ಹಂಚಿಕೊಂಡು ಚರ್ಚಿಸುವ ಕಾರ್ಯ ಸಮನ್ವಯ ಬೈಠಕ್‌ನಲ್ಲಿ ಮಾಡಲಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಡಾ. ಮನಮೋಹನ್ ವೈದ್ಯ ಹೇಳಿದರು.

ಮಹಾರಾಷ್ಟ್ರದ ಪುಣೆಯಲ್ಲಿ ಸೆ.14 ರಿಂದ ಸೆ.16ರವರೆಗೆ ನಡೆದ ಮೂರು ದಿನಗಳ ಸಮನ್ವಯ ಬೈಠಕ್‌ನ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.




ಸಮನ್ವಯ ಬೈಠಕ್ ವರ್ಷದಲ್ಲಿ ಒಂದು ಬಾರಿ ನಡೆಯುತ್ತದೆ. ಒಂದು ಪ್ರೇರಣೆಯಿಂದ ಸಮಗ್ರ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಾಜ ಜೀವನದ ವಿವಿಧ ಕ್ಷೇತ್ರಗಳಲ್ಲಿ ಸ್ವಯಂಸೇವಕರು ಸಕ್ರಿಯರಾಗಿದ್ದಾರೆ. ಸಂಘಕಾರ್ಯ ಆರಂಭಗೊಂಡು 97 ವರ್ಷಗಳಾಗಿವೆ. ಒಟ್ಟು ನಾಲ್ಕು ಹಂತಗಳಲ್ಲಿ ಸಂಘಕಾರ್ಯ ವಿಸ್ತಾರವನ್ನು ಪಡೆದುಕೊಂಡಿದೆ. ಮೊದಲ ಹಂತದಲ್ಲಿ ಹಿಂದೂ ಸಮಾಜ ಸಂಘಟಿತವಾಗುತ್ತದೆ. ಎಲ್ಲರೂ ಒಟ್ಟಿಗೆ ಸೇರಿ ಒಂದು ದಿಕ್ಕಿನಲ್ಲಿ ಹೆಜ್ಜೆ ಹಾಕುವುದು ಸಾಧ್ಯವಾಗುತ್ತದೆ. ಒಂದು ಸ್ವರದಲ್ಲಿ, ಒಂದೇ ಮನಸ್ಸಿನಲ್ಲಿ ಭಾರತದ ಕುರಿತು ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಶ್ವಾಸವನ್ನು ಸಮಾಜದಲ್ಲಿ ಮೂಡಿಸುವ ಅವಶ್ಯಕತೆ ಇತ್ತು. ಹಾಗಾಗಿ ಮೊದಲ 25 ವರ್ಷಗಳು ಸಂಘಟನೆ ಮತ್ತು ವ್ಯಕ್ತಿ ನಿರ್ಮಾಣಕ್ಕೆ ಮಾತ್ರ ಸಂಘ ಪ್ರಾಮುಖ್ಯತೆಯನ್ನು ನೀಡಿತ್ತು.

ಸ್ವಾತಂತ್ರ್ಯದ ನಂತರ ಸಂಘಕಾರ್ಯ ವಿಸ್ತಾರದ ಎರಡನೇ ಹಂತ ಆರಂಭವಾಯಿತು. ಪ್ರಥಮ ಹಂತದ ಸಂಘಕಾರ್ಯದ ಧ್ಯೇಯವನ್ನು ಮುನ್ನಡೆಸುತ್ತಾ ಶಾಖೆಯ ಸಂಪರ್ಕಕ್ಕೆ ಬಾರದ ವಿವಿಧ ಕ್ಷೇತ್ರಗಳ ಜನರನ್ನು ತಲುಪುವುದಕ್ಕಾಗಿ ಸಂಘದ ಸ್ವಯಂಸೇವಕರು ಸಂಘದ ರಾಷ್ಟ್ರೀಯ ವಿಚಾರವನ್ನು ಮೂಲವಾಗಿಸಿಕೊಂಡು ಈ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಸಂಘಟನೆಗಳನ್ನು ಪ್ರಾರಂಭಿಸಿದರು. ಪ್ರಸ್ತುತ 35–36 ವಿವಿಧ ಸಂಘಟನೆಗಳು ಸಂಘದ ಪ್ರೇರಣೆಯಿಂದ ಮುನ್ನಡೆಯುತ್ತಿವೆ.

ಸಂಘಕಾರ್ಯ ವಿಸ್ತಾರದ ಮೂರನೇ ಹಂತ 1989ರ ಡಾ.ಕೇಶವ ಬಲಿರಾಮ ಹೆಡಗೇವಾರ್ ಅವರ ಜನ್ಮಶತಾಬ್ದಿಯ ನಂತರ 1990ರಲ್ಲಿ ಪ್ರಾರಂಭವಾಯಿತು. ಅದರ ಸ್ವರೂಪವೇ ಹೆಚ್ಚು ಜನರನ್ನು ತಲುಪುವುದಾಗಿತ್ತು. 1991–94ರೊಳಗೆ ಸೇವಾ, ಸಂಪರ್ಕ ಹಾಗೂ ಪ್ರಚಾರ ವಿಭಾಗಗಳು ಪ್ರಾರಂಭವಾದವು. ಈ ವಿಶಿಷ್ಟ ಕ್ಷೇತ್ರಗಳ ಮೂಲಕ ಸಮಾಜ ಪರಿವರ್ತನೆಯ ಕಾರ್ಯವನ್ನು ಸ್ವಯಂಸೇವಕರು ಪ್ರಾರಂಭಿಸಿದರು. ಕುಟುಂಬ ಪ್ರಬೋಧನ, ಗ್ರಾಮವಿಕಾಸ, ಪರ್ಯಾವರಣ ಸಂರಕ್ಷಣಾ ಮುಂತಾದ ಗತಿವಿಧಿಗಳ ಮೂಲಕ ಸಂಘದ ತೃತೀಯ ಹಂತದಲ್ಲಿ ಈ ಕೆಲಸಗಳು ಮುನ್ನೆಲೆಗೆ ಬಂದವು.

2006ರ ನಂತರ ಗುರೂಜಿ ಅವರ ಜನ್ಮಶತಾಬ್ದಿಯ ನಂತರ ಸಂಘಕಾರ್ಯದ ನಾಲ್ಕನೇ ಹಂತ ಪ್ರಾರಂಭವಾಯಿತು. ಈ ಹಂತದಲ್ಲಿ ಪ್ರತಿ ಸ್ವಯಂಸೇವಕ ರಾಷ್ಟ್ರದ ಸರ್ವಾಂಗೀಣ ಉನ್ನತಿಯ ದಿಕ್ಕಿನಲ್ಲಿ ಸಕ್ರಿಯನಾಗುವಂತೆ ಮಾಡುವುದರ ಕುರಿತು ಪ್ರಾಧಾನ್ಯತೆಯನ್ನು ನೀಡಲಾಗಿದೆ.

ಸಮನ್ವಯ ಬೈಠಕ್‌ನಲ್ಲಿ ಸಂಘ ಪ್ರೇರಿತ ಎಲ್ಲಾ ಸಂಘ ಸಂಸ್ಥೆಗಳಲ್ಲಿನ ಮಹಿಳಾ ಸಹಭಾಗಿತ್ವವನ್ನು ಹೆಚ್ಚುಗೊಳಿಸುವ ದೃಷ್ಟಿಯಿಂದ ಅದಾಗಲೇ ಸಕ್ರಿಯವಾಗಿದ್ದ ಕಾರ್ಯಕರ್ತೆಯರ ಸಮನ್ವಯ ನಡೆಯಿತು. ಮಹಿಳೆಯರ ನಡುವೆ ವ್ಯಾಪಕ ಸಂಪರ್ಕ ನಿರ್ಮಾಣವಾಗಲು, ಮಹಿಳೆಯ ಮೂಲಕ ಭಾರತೀಯ ಚಿಂತನೆಯನ್ನು ಸಮಾಜದಲ್ಲಿ ಪಸರಿಸಲು ಹಾಗೂ ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ ವಿಭಾಗ ಸ್ತರದಲ್ಲಿ ಮಹಿಳಾ ಸಮ್ಮೇಳನವನ್ನು ಮಾಡುವ ಕುರಿತು ನಿರ್ಧರಿಸಲಾಗಿತ್ತು. ಮಹಿಳೆಯರಲ್ಲಿ ಪರಸ್ಪರ ಸಂಪರ್ಕ ಹೆಚ್ಚಿಸಲು ದೇಶಾದ್ಯಂತ 411 ಸಮ್ಮೇಳನಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಇಲ್ಲಿಯವರೆಗೆ, 12 ಪ್ರಾಂತ್ಯಗಳಲ್ಲಿ 73 ಸಮ್ಮೇಳನಗಳನ್ನು ಆಯೋಜಿಸಲಾಗಿದ್ದು ಅವುಗಳಲ್ಲಿ ಒಟ್ಟು ಸುಮಾರು 1,30,000 ಮಂದಿ ಮಹಿಳೆಯರು ಭಾಗವಹಿಸುವ ಮೂಲಕ ಉತ್ತಮ ಪ್ರತಿಕ್ರಿಯೆಯನ್ನು ಪಡೆದಿವೆ. ಸಂಘದ ಶತಮಾನೋತ್ಸವ ಯೋಜನೆಯಡಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕುರಿತು ಬೈಠಕ್‌ನಲ್ಲಿ ಚರ್ಚಿಸಲಾಯಿತು.

ವಿವಿಧ ಸಂಘಟನೆಗಳಲ್ಲಿ ಕಾರ್ಯನಿರತರಾಗಿರುವ ಕಾರ್ಯಕರ್ತರು ನಮ್ಮ ಸಹಯಾತ್ರಿಗಳು ಎಂಬ ಸಮನ್ವಯದ ಮನಸ್ಥಿತಿ ರೂಪುಗೊಳ್ಳುತ್ತದೆ. ಎಲ್ಲರೂ ಒಟ್ಟಾಗಿ ಪರಸ್ಪರ ಪೂರಕವಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಿ ಭಾರತವನ್ನು ಸಮೃದ್ಧ ಭಾರತವನ್ನಾಗಿಸುವ ಕುರಿತು ಈ ಬೈಠಕ್‌ನಲ್ಲಿ ನಿರ್ಧರಿಸಲಾಯಿತು. ಎಲ್ಲಾ ಸಂಘಟನೆಯವರು ಜೊತೆಯಾಗಿ ಕಾರ್ಯನಿರ್ವಹಿಸುವ ಕುರಿತು ಪ್ರಶಿಕ್ಷಣ ಹಾಗೂ ಹೊಸದಾಗಿ ಸಂಘಟನೆಯ ಭಾಗವಾದವರಿಗೆ ಸಂಘ ಪರಿಚಯ ವರ್ಗ ಮಾಡುವ ಕುರಿತು ಇಲ್ಲಿ ಚರ್ಚಿಸಲಾಯಿತು. ಹಾಗೆಯೇ ಸಂಘದ ಸಂಪರ್ಕಕ್ಕೆ ಬಾರದ ಮತ್ತು ನಮ್ಮ ಕಾರ್ಯಗಳಿಗೆ ಜೊತೆಯಾಗಬಲ್ಲ ಸಜ್ಜನ ಶಕ್ತಿಯನ್ನು ಸಂಪರ್ಕಿಸುವ ಕಾರ್ಯವಾಗಬೇಕಿದೆ.

ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ಉಪಸ್ಥಿತರಿದ್ದರು. ಮೂರು ದಿನಗಳ ಕಾಲ ನಡೆದ ಸಮನ್ವಯ ಬೈಠಕ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹಾಗೂ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ 36 ಸಂಘಟನೆಗಳ 276 ಪ್ರಮುಖರು ಭಾಗವಹಿಸಿದ್ದರು.

**ಸಂಘಕಾರ್ಯ ವೃದ್ಧಿ:** ಸಂಘಕಾರ್ಯದಲ್ಲಿ ಸಮಾಜದ ಸಹಭಾಗಿತ್ವ ಹೆಚ್ಚುತ್ತಿದೆ. ಕೊರೋನಾ ಸಂದರ್ಭದಲ್ಲಿ ಅಂದರೆ 2020 ರಲ್ಲಿ, ದೇಶದಲ್ಲಿ 38,913 ಸ್ಥಳಗಳಲ್ಲಿ ಶಾಖೆಗಳಿದ್ದವು. 2023ರಲ್ಲಿ ಈ ಸಂಖ್ಯೆಯು 42,613ಕ್ಕೆ ಏರಿದೆ. ಅಂದರೆ 9.5% ಪ್ರತಿಶತದಷ್ಟು ಹೆಚ್ಚಾಗಿದೆ. 2020ರಲ್ಲಿ 62,491 ಇದ್ದ ಶಾಖೆಗಳ ಸಂಖ್ಯೆ 2023ರಲ್ಲಿ 68,651ಕ್ಕೆ ಏರಿಕೆಯಾಗಿದೆ. 2020ರಲ್ಲಿ ಇದ್ದ 20,300 ಸಾಪ್ತಾಹಿಕ ಮಿಲನ್‌ಗಳ ಸಂಖ್ಯೆ 26,877ಕ್ಕೆ ಏರಿಕೆಯಾಗಿದೆ. 2020ರಲ್ಲಿ 8,732 ಸಂಘ ಮಂಡಲಿಗಳಿದ್ದವು. ಆದರೆ 2023ರ ಹೊತ್ತಿಗೆ ಅವುಗಳ ಸಂಖ್ಯೆ 10,400ರಷ್ಟಾಗಿದೆ. JOIN RSS ವೆಬ್‌ಸೈಟ್ ಮೂಲಕ ಪ್ರತಿ ವರ್ಷ 20–35 ವಯೋಮಿತಿಯ 1ಲಕ್ಷಕ್ಕೂ ಹೆಚ್ಚು ತರುಣರು ಆನ್‌ಲೈನ್ ಮೂಲಕ ಸಂಘದ ಸ್ವಯಂಸೇವಕರಾಗಲು ಅರ್ಜಿಯನ್ನು ಸಲ್ಲಿಸಿರುವುದು ಸಂಘಕಾರ್ಯದ ವೃದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ.

## ಭತ್ತದ ತಳಿ ತಪಸ್ವಿ ಬೆಳ್ತಂಗಡಿಯ ಅಮೈ ದೇವರಾವ್

ದೆಹಲಿಯಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR) ಏರ್ಪಡಿಸಿದ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡದ ಬೆಳ್ತಂಗಡಿಯ ಕಿಲ್ಲೂರಿನ ಅಮೈ ದೇವರಾವ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಕೃಷಿ ಸಾಧಕ' ಪ್ರಶಸ್ತಿ ಪ್ರದಾನ ಮಾಡಿದರು. ದೇವರಾವ್ ಅವರು ತಮ್ಮ ಐದು ಎಕರೆ ಗದ್ದೆಯಲ್ಲಿ 175ಕ್ಕೂ ಅಧಿಕ ಭತ್ತದ ತಳಿಗಳನ್ನು ಬೆಳೆದಿದ್ದಾರೆ.



## ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಹೊಯ್ಸಳ ದೇಗುಲಗಳು

ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಕರ್ನಾಟಕದ ಹೊಯ್ಸಳ ದೇವಾಲಯಗಳನ್ನು ಸೇರ್ಪಡೆ ಮಾಡಲಾಗಿದೆ. ಕರ್ನಾಟಕದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಪ್ರಸಿದ್ಧ ಹೊಯ್ಸಳ ದೇವಾಲಯಗಳನ್ನು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲಾಗಿದೆ.

ಹೊಯ್ಸಳ ದೇವಾಲಯಗಳು, ಏಪ್ರಿಲ್ 2014ರಿಂದಲೂ ಯುನೆಸ್ಕೊದ ತಾತ್ಕಾಲಿಕ ಪಟ್ಟಿಯಲ್ಲಿದ್ದವು. 2022–23ಕ್ಕೆ ವಿಶ್ವ ಪಾರಂಪರಿಕ ತಾಣವಾಗಿ ಪರಿಗಣಿಸಲು ಜನವರಿ 2022ರಲ್ಲಿ ಭಾರತದಿಂದ ನಾಮನಿರ್ದೇಶನ ಮಾಡಲಾಗಿತ್ತು. ಸರ್ಕಾರದ ಮನವಿಗೆ ಒಪ್ಪಿ ಈಗ ಯುನೆಸ್ಕೊ ಪಟ್ಟಿಗೆ ಸೇರ್ಪಡೆ ಮಾಡಿದೆ. ಇದನ್ನು ವಿಶ್ವಸಂಸ್ಥೆಯು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಈ ವಿಚಾರವನ್ನು ತಮ್ಮ ಟ್ವಿಟರ್/ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಇದು ದೇಶಕ್ಕೆ ಮತ್ತಷ್ಟು ಹೆಮ್ಮೆಯನ್ನುಂಟು ಮಾಡಿದೆ. ಹೊಯ್ಸಳ ದೇವಾಲಯಗಳ ಕಾಲಾತೀತ ಸೌಂದರ್ಯ ಮತ್ತು ಸಂಕೀರ್ಣ ವಿವರಗಳು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಮ್ಮ ಪೂರ್ವಜರ ಅಸಾಧಾರಣ ಕರಕುಶಲತೆಗೆ ಸಾಕ್ಷಿಯಾಗಿದೆ.



## ಅಮೇರಿಕಾದ ಲೂಯಿಸ್ ವೆಲ್ಲೆಯಲ್ಲಿನ್ನು ಸೆಪ್ಟೆಂಬರ್ 3 'ಸನಾತನ ಧರ್ಮ ದಿನ'

**ನ್ಯೂಯಾರ್ಕ್:** ದೇಶದಲ್ಲಿ ಭಾರೀ ವಿವಾದ ಸೃಷ್ಟಿಸಿರುವ ರಾಜಕೀಯ ನಾಯಕರುಗಳ ಸನಾತನ ಧರ್ಮದ ಕುರಿತಾದ ಹೇಳಿಕೆಗಳ ಬೆನ್ನಲ್ಲೇ ಅಮೇರಿಕಾದ ನಗರವೊಂದರಲ್ಲಿ ಸೆ.3 ಅನ್ನು 'ಸನಾತನಧರ್ಮದಿನ'ವೆಂದು ಆಚರಿಸುವ ನಿರ್ಧಾರ ಮಾಡಲಾಗಿದೆ. ಘೋಷಣೆ ಅಮೆರಿಕದ ಕೆಂಟುಕಿ ರಾಜ್ಯದ ಲೂಯಿಸ್‌ವೆಲ್ಲೆ ನಗರದ ಮೇಯರ್ ಕ್ರೇಗ್ ಗ್ರೀನ್ಬರ್ಗ್ ಅವರು ಕಾರ್ಯಕ್ರಮವೊಂದರಲ್ಲಿ ಈ ಘೋಷಣೆ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಲ್ಲಿನ ಲೆಫ್ಟಿನೆಂಟ್ ಗವರ್ನರ್ ಜಾಕ್ವೆಲಿನ್ ಕೋಲ್ಮನ್ ಹಾಗೂ ಆಧ್ಯಾತ್ಮಿಕ ಗುರುಗಳಾದ ಶ್ರೀ ರವಿಶಂಕರ್, ಚಿದಾನಂದ್ ಸರಸ್ವತಿ, ಪರಮಾರ್ಥ ನಿಕೇತನ ಅಧ್ಯಕ್ಷರಾದ ಋಷಿಕೇಶ್ ಮತ್ತು ಭಗವತಿ ಸರಸ್ವತಿ ಸೇರಿ ಹಲವರು ಉಪಸ್ಥಿತರಿದ್ದರು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.